ಅಷ್ಟರಲ್ಲೇ ಕಂಗೆಟ್ಟ ನಜ್ಮಾ ಒಳಬಂದು ಭೋರನೆ ಅಳ ತೊಡಗಿದಳು. ಸಾಲಿಹಾಳ ಪಾದಗಳ ಬಳಿ ಅವಳು ಕುಸಿದು ಕುಳಿತು ಅಳುತ್ತಾ ಅವಳು ಕಿರುಚಿದಳು, ''ಅಮ್ಮಿ, ಇದು ಹೇಗಾಯಿತು?'' ಆದೊಂದು ಪ್ರಶ್ನೆಯನ್ನು ಬಾಣದ ರೂಪದಲ್ಲಿ ಅವಳು ಎಸೆದಳೋ ಇಲ್ಲವೋ, ಅವಳ ಗಂಡ ಕೂಡ ಎದ್ದು ನಿಂತು ಕಾಲನ್ನು ಧಪ್ಪನೆ ನೆಲಕ್ಕೆ ಬಡಿಯುತ್ತಾ, ''ಹೌದು ಹೌದು, ಇದು ಹೇಗೆ ಆಯಿತು? ನೀನೆಲ್ಲಿ ಸಾಯೋಕೆ ಹೋಗಿದ್ದೆ?'' ಎಂದು ಕೂಗು ಹಾಕಿದ. ಅವಳು ಯಾರಿಗೂ ಉತ್ತರಿಸುವ ಗೋಜಿಗೆ ಹೋಗಲಿಲ್ಲ. ಅದಾದ ನಂತರ ಅದೆಷ್ಟು ಜನ ಅವಳನ್ನು ಕೇಳಿದರೋ ಅದೆಷ್ಟು ಜನ ಅವಳೆಡೆಗೆ ತೋರು ಬೆರಳನ್ನು ತೋರಿದರೋ ಅವಳಿಗೆ ಗೊತ್ತಿಲ್ಲ. ಯಾರಿಗೂ ಅವಳು ಉತ್ತರಿಸುವ ಗೋಜಿಗೆ ಹೋಗಲಿಲ್ಲ. ಅವಳ ಹತ್ತಿರ ಯಾವುದೇ ಉತ್ತರಗಳು ಇರಲಿಲ್ಲ. ಅವಳ ಬದಲಿಗೆ ಎಲ್ಲರಿಗೂ ಉತ್ತರಿಸಿದವಳು ಫೈಜಾ. ಆರಂಭದ ಗೊಂದಲ, ಆಕ್ರೋಶ ಮತ್ತು ಆಘಾತ ಎಲ್ಲವೂ ಮುಗಿದ ನಂತರ ಮುಂದಿನ ಕೆಲಸ ಕಾರ್ಯಗಳು ಆರಂಭವಾದವು. ಯಾರೋ ಖಬರಸ್ತಾನ್‌ಗೆ ಹೋಗಿ ಗೋರಿ ತೋಡುವ ವ್ಯವಸ್ಥೆಯನ್ನು ನೋಡಿಕೊಂಡರು. ಇನ್ನು ಯಾರೋ ಶವಕ್ಕೆ ತೊಡುವ ಕೆಂಪು ಅಲವಾನಿನ ಬಟ್ಟೆಯನ್ನು ತಂದರು. ಅಂತ್ಯಕ್ರಿಯೆಯ ತಯಾರಿ ಕ್ರಮೇಣ ಆರಂಭವಾಯಿತು. ಜನ ಗುಂಪು ಗುಂಪಾಗಿ ಬರತೊಡಗಿದರು. ಯಾರೊ ಒಬ್ಬರು ಶಾಮಿಯಾನವನ್ನು ತಂದು ಮನೆ ಎದುರಿಗೆ ನಿಲ್ಲಿಸಿ ಕುರ್ಚಿಗಳನ್ನು ಇಟ್ಟರು. ಪುರುಷರು ಆ ಕುರ್ಚಿಗಳ ಮೇಲೆ ಕುಳಿತರು. ಮನೆ ತುಂಬಾ ಮಹಿಳೆಯರು ತುಂಬಿದರು. ಎಲ್ಲರ ಮನಸ್ಸಿನಲ್ಲೂ ವಿಷಾದದ ಛಾಯೆ ಮಡುಗಟ್ಟಿತ್ತು. ಎಷ್ಟು ಚಂದದ ಹೆಣ್ಣು ಮಗಳು – ಅವಳ ಎತ್ತರ, ಬಣ್ಣ ಆ ನಾಜೂಕು ಚಹರೆ... ಸಾಯೋದಕ್ಕೆ ಎಂದು ಅಲ್ಲಾಹ್ ಅಷ್ಟೊಂದು ಚಲುವನ್ನು ಕೊಟ್ಟನೇ? ಪಾಪ! ಬಾಳಿ ಬದುಕಬೇಕಾದ ಹುಡುಗಿ ಹೀಗೆ ತುಂಬು ಯೌವನದಲ್ಲಿ ಆತ್ಮಹತ್ಯೆ ಮಾಡಿಕೊಂಡಳಲ್ಲ! ಅಂತಹದು ಏನಾಗಿತ್ತು!

ಸಾಲಿಹಾಳ ಕಣ್ಣುಗಳು ಸುತ್ತಲಿನ ಪರಿಸರವನ್ನು ನೋಡುತ್ತಿದ್ದವು. ಆದರೆ ಯಾವುದನ್ನೂ ಗುರುತಿಸುತ್ತಿರಲಿಲ್ಲ. ಅವಳ ಪಾಲಿಗೆ ಎಲ್ಲವೂ ಸ್ತಬ್ಧವಾಗಿದ್ದವು... ಸಕಲ ವಸ್ತುಗಳು ಅರ್ಥಹೀನವಾಗಿದ್ದವು. ಅಪಾರ ಜನಸಂದಣಿ ಸೇರಿತ್ತು. ಇಕ್ಕಟ್ಟಾದ ಸ್ಥಳದಲ್ಲಿಯೇ ಅನೇಕ ಜನ ಕುಳಿತಿದ್ದರು; ಕೆಲವರು ಆಕೆಯ ನೋವಿನೊಂದಿಗೆ ಮಿಡಿಯುತ್ತಿದ್ದರು. ಇನ್ನೂ ಕೆಲವರು, 'ಹೋ ಅಲ್ಲಾ ಎಂಥಾ ಕಾಲ ಬಂತಪ್ಪ' ಎಂದು ನಿಡುಸುಯ್ಯುತ್ತಿದ್ದರು. ಇನ್ನೂ ಕೆಲವರಿಗೆ ಒಳಗೊಳಗೇ ಕೋಪ ಬರುತ್ತಿತ್ತು ಮತ್ತು ಅನೇಕರ ಬಾಯಿ ಚಪಲ ಹೆಚ್ಚಿತ್ತು. ಸಮುದಾಯದ ನಡುವೆ ನ್ಯಾಯವನ್ನು ಜಾರಿಗೊಳಿಸಲು ತಾವೇ ನೇಮಕವಾದವರು ಎಂಬಂತೆ ಆಗು ಹೋಗುಗಳ ಬಗ್ಗೆ ತಕ್ಕಡಿ ಹಿಡಿಯುತ್ತ ತಮ್ಮದೇ ವ್ಯಾಖ್ಯಾನವನ್ನು ನೀಡುತ್ತಾ, ತಮ್ಮ ಹಿರಿತನವನ್ನು ಸ್ಥಾಪಿಸುವುದರೊಡನೆ ಯಾರನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಸಂಬಂಧ ಪಟ್ಟವರ ಮೇಲೆ ವಾಗ್ಬಾಣಗಳನ್ನು ಬಿಡುವುದರ ಮೂಲಕ ಇಡೀ ಜಗತ್ತನ್ನು ಸರಿಪಡಿಸುವ ಇರಾದೆಯನ್ನು ಹೊಂದಿದ್ದರು. ಆದರೆ ಅವರ ಚುಚ್ಚು ನುಡಿಗಳು ಬೇರೆಯವರ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬ ಅರಿವಿದ್ದೂ ಅವರ ನಾಲಗೆಗೆ ಯಾವುದೇ ಹಿಡಿತವಿರಲಿಲ್ಲ. ಖಮರುನ್ ಚಿಕ್ಕಮ್ಮಳ ತೀಕ್ಷ್ಣ ದೃಷ್ಟಿಯು ಶವದ ಹೊಟ್ಟೆಯ ಮೇಲೆ ಕೇಂದ್ರೀಕರಿಸಿತು. "ಅಯ್ಯೋ! ಆ ಹುಡುಗಿಯ ಹೊಟ್ಟೆ ಯಾಕೆ ದಪ್ಪ ಕಾಣಿಸುತ್ತಿದೆ?'' ಎಂದು ಅಮಾಯಕಳಂತೆ ಕೇಳಿದಳು. ಅಲ್ಲಿಯೇ ಇದ್ದ ಫೈಜಾಗೆ ಕೋಪ ಬಂತು. ಅವಳು, ''ಯಾಕೆ ಗೊತ್ತಿಲ್ಲವಾ ಚಿಕ್ಕಮ್ಮ? ಅವಳ ಹೊಟ್ಟೆಯ ಮೇಲೆ ಎರಡು ಕೆ.ಜಿ ಉಪ್ಪಿನ ಗಂಟನ್ನು ಇರಿಸಿದ್ದಾರೆ. ಅದಕ್ಕೇ ದಪ್ಪ ಕಾಣುತ್ತಿದೆ. ಅದು ಯಾಕೆ ಆ ಪದ್ಧತಿ ಬಂತು ಎಂಬುದನ್ನು ನೀವು ಹೇಳಬೇಕಷ್ಟೆ" ಎಂದು ಅವಳು ವ್ಯಂಗ್ಯವಾಗಿ ಹೇಳಿದಳು.

''ಓ ದೇವರೇ, ಬರೀ ಸ್ಕೂಟರ್‌ನಲ್ಲಿ ಸುತ್ತಾಡಿದರೆ ಆಯಿತಾ? ಅಸಲಿಗೆ ದೀನಿಯಾತ್ (ಧಾರ್ಮಿಕ ಶಿಕ್ಷಣ) ಬೇಕು. ಅಂದರೆ ಅಲ್ಲಾಹನ ಭಯ, ನರಕದ ಭೀತಿ ಇದ್ದರೆ ಇದೆಲ್ಲಾ ಆಗೋದಿಲ್ಲ." ಈ